ದಿನಾಂಕ 05-02-2024 ಅಸಲು ದಾವಾ ಸಂ.30/2010

ಡಿ.ಡಬ್ಲ್ಯೂ-1

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀ ಸವಾಲು : ವಾದಿ ಪರ ಶ್ರೀ.ಎಂ ಜಿ ಕೆ ವಕೀಲರಿಂದಃ-**

3 ನೇ ಪ್ರತಿವಾದಿ ನನ್ನ ಹೆಂಡತಿ. 4 ರಿಂದ 6 ನೇ ಪ್ರತಿವಾದಿಯರು ನನ್ನ ಮಕ್ಕಳು. 7 ನೇ ಪ್ರತಿವಾದಿ ನನ್ನ ಮಗಳು. ದಾವಾ ಜಮೀನು ನನಗೆ ಹಿರಿಯರಿಂದ ಅಂದರೆ ನನ್ನ ತಂದೆಯಿಂದ ಬಂದಿತ್ತು. ನನ್ನ ತಂದೆಗೆ ಒಟ್ಟು 8 ಎಕರೆ ಜಮೀನು ಇತ್ತು. ನಾವು 5 ಜನ ಅಣ್ಣತಮ್ಮಂದಿರಿದ್ದು, ಅವರ ಹೆಸರು ರಾಮ, ಸಿದ್ರಾಮ, ವಸಂತ, ಮೋತಿರಾಮ ಮತ್ತು ನಾನು ಅಂದರೆ ಸಣ್ಣಲಕ್ಷ್ಮಣ. ನಮ್ಮ ತಂದೆ ತೀರಿಕೊಂಡ ನಂತರ ನಾವು ವಾಟ್ನಿ ಮಾಡಿಕೊಂಡಿದ್ದು, ನನ್ನ ಹೆಸರಿಗೆ 1 ಎಕರೆ 15 ಗುಂಟೆ ಜಮೀನು ಬಂದಿತ್ತು. ಅದಕ್ಕೆ ಖಾತಾ ಉತಾರ ಆಗಿತ್ತು. ನನಗೆ 3 ಜನ ಗಂಡು ಮಕ್ಕಳಿದ್ದು, ಒಬ್ಬ ಹೆಣ್ಣು ಮಗಳು ಇದ್ದಾರೆ. ನಾನು ಸದರಿ ಜಮೀನನ್ನು 15 ಸಾವಿರ ರೂ.ಗಳಿಗೆ 1 ನೇ ಪ್ರತಿವಾದಿಗೆ 5 ವರ್ಷಕ್ಕೆ ಬರೆದುಕೊಟ್ಟಿದ್ದೆ ಎಂದರೆ ಸರಿ. ಸದರಿ ಜಮೀನನ್ನು 5 ವರ್ಷಗಳು ಊಟ ಮಾಡಿದ ನಂತರ ಬಿಟ್ಟುಕೊಡಬೇಕಾಗಿ ಮಾತುಕತೆ ಆಗಿತ್ತು, ಅದರೂ 5 ವರ್ಷಗಳು ಆದ ನಂತರ ಅವರು ಬಿಡಲಿಲ್ಲ. ನಂತರ ನಾನು ನನ್ನ ಮಕ್ಕಳ ಮದುವೆ ಸಲುವಾಗಿ ಅದನ್ನು ವಾದಿಗೆ ಮಾರಾಟ ಮಾಡಿದೆ. ನಾನು ಒತ್ತಾಯ ಮಾಡಿ ಕೇಳಿದಾಗಲು ಸಹ ಆಕೆ ಜಮೀನು ಬಿಡದ ಕಾರಣ ಆಕೆಯೇ ದಾವೆ ಸಲ್ಲಿಸಿದ್ದರು. ನಿಪಿ-2 ರಂತೆ ವಾದಿಗೆ ನಾನು, ನನ್ನ ಹೆಂಡತಿ ಮತ್ತು ಮಕ್ಕಳು ಖರೀದಿ ಹಾಕಿಕೊಟ್ಟಿದ್ದು ಅದಕ್ಕೆ ನನ್ನದು ತಕರಾರು ಇರುವುದಿಲ್ಲ. ಆ ಕಾಲಕ್ಕೆ 6 ನೇ ಪ್ರತಿವಾದಿ ಅಲ್ಪ ವಯಸ್ಕನಿದ್ದ. ನಾನು ವಾದಿಗೆ ದಾವಾ ಆಸ್ತಿಯ ಕಬ್ಜಾ ಕೊಟ್ಟಿದ್ದೇನೆಂದರೆ ಸರಿ. ನಾನು ವಾದಿಯ ಪರವಾಗಿ ಸಾಕ್ಷಿ ನುಡಿಯಲು ಬಂದಿದ್ದೇನೆ.

**ಪಾಟೀಸವಾಲುಃ 1 ನೇ ಪ್ರತಿವಾದಿಯ ಪರ ಶ್ರೀ. ಎ ವ್ಹಿ ಬಿ ವಕೀಲರಿಂದಃ-**

ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ., ಬನಹಟ್ಟಿ.